ಆ. ಇಲ್ಲ.

ಇ. ಉದ್ಭವಿಸುವುದಿಲ್ಲ.

ಈ. ಹೌದು.

ರಾಜ್ಯ ರಸ್ತೆ ಸಾರಿಗೆಯ ಮಂಗಳೂರು ವಿಭಾಗದಲ್ಲಿ ಸಿಬ್ಬಂದಿಗಳ ಕೊರತೆ.

535 (922): ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ):–

ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಮಂಗಳೂರು ವಿಭಾಗದಲ್ಲಿ ಎಷ್ಟು ಕಾರ್ಮಿಕರ ಮತ್ತು ಎಷ್ಟು ತಾಂತ್ರಿಕ ಸಿಬ್ಬಂದಿಗಳ ಕೊರತೆ ಇದೇ;

ಆ. ಈ ಕೊರತೆಯನ್ನು ನೀಗಿಸಿ, ಸಿಬ್ಬಂದಿಗಳ ನೇಮಕ ಯಾವಾಗ ಮಾಡಲಾಗುವುದು;

ಇ. ಈ ವಿಭಾಗದಲ್ಲಿ ತಾತ್ಕಾಲಿಕ ನೆಲೆಯಲ್ಲಿ ನೇಮಕ ಮಾಡಿದ ಚಾಲಕರೆಷ್ಟು, ಕಂಡಕ್ಟರ್‌ಗಳೆಷ್ಟು;

ಈ. ಇವರನ್ನು ಖಾಯಂ ಮಾಡಲಾಗುವುದೇ;

ಉ. ಸಿಬ್ಬಂದಿಗಳ ಕೊರತೆ ಎಂಬ ಕಾರಣದಿಂದಾಗಿ ಇಲ್ಲಿನ ದಿನನಿತ್ಯದ ಸಾರಿಗೆ ವ್ಯವಸ್ಥೆಗೆ ತೊಂದರೆಯಾಗದಂತೆ ಮಾಡುವ ಕಾರ್ಯಕೈಗೊಳ್ಳಲಾಗುವುದೆ ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):–

ಅ.	ತಾಂತ್ರಿಕ ಸಿಬ್ಬಂದಿ	134
	ಇತರೆ ಸಿಬ್ಬಂದಿ	332

ಆ. ಸಾಧ್ಯವಾದಷ್ಟು ಶೀಘ್ರದಲ್ಲಿ

ಇ. 180 ಚಾಲಕರು ಮತ್ತು 178 ನಿರ್ವಾಹಕರುಗಳನ್ನು ಈ ವಿಭಾಗದಲ್ಲಿ ತಾತ್ಕಾಲಿಕವಾಗಿ ನೇಮಿಸಿಕೊಳ್ಳಲಾಗಿದೆ.

ಈ. ಈ ಚಾಲಕ ನಿರ್ವಾಹಕರುಗಳನ್ನು ಪದವ್ಯಂದ ಮತ್ತು ನೇಮಕಾತಿಯ ನಿಯಮಾವಳಿಯಂತೆ ತಾತ್ಕಾಲಿಕವಾಗಿ 90 ದಿನಗಳಿಗೆ ನೇಮಿಸಿಕೊಳ್ಳಲಾಗಿದೆ. ಆದಾಗ್ಯೂ ಈ ನೇಮಕಾತಿ ಬಗ್ಗೆ ನ್ಯಾಯಾಲಯದಲ್ಲಿ ದಾವೆ ಇದ್ದು ಅದು ಇನ್ನು ಇತ್ಯರ್ಥವಾಗಿರುವುದಿಲ್ಲ.

ಉ. ಸಾರ್ವಜನಿಕರಿಗೆ ತೊಂದರೆಯಾಗದಂತೆ ಹಾಗೂ ಒಳ್ಳೆಯ ಸಾರಿಗೆ ವ್ಯವಸ್ಥೆಯನ್ನು ಕಲ್ಪಿಸಲು ಮತ್ತು ದಿನನಿತ್ಯದ ಸಾರಿಗೆ ಸಂಚಾರಕ್ಕಾಗಿ 100 ಚಾಲಕ ನಿರ್ವಾಹಕರುಗಳನ್ನು ತಾತ್ಕಾಲಿಕವಾಗಿ ನೇಮಿಸಿಕೊಳ್ಳಲಾಗಿದೆ. ಸಧ್ಯಕ್ಕೆ ಚಾಲಕ ನಿರ್ವಾಹಕರುಗಳ ಕೊರತೆ ಮಂಗಳೂರು ವಿಭಾಗದಲ್ಲಿ ಇರುವುದಿಲ್ಲ. ಆದರೆ ಬೇರೆ ಸಿಬ್ಬಂದಿಗಳ ಕೊರತೆ ಇದ್ದರೂ ಸಹ ಸಾರ್ವಜನಿಕರಿಗೆ ಸಾರಿಗೆ ವ್ಯವಸ್ಥೆಯನ್ನು ಉತ್ತಮವಾಗಿ ನೀಡಲಾಗುತ್ತಿದೆ.

ರಾಜ್ಯದಲ್ಲಿ ವರದಕ್ಷಿಣೆಯ ಸಾವುಗಳ ಸಂಖ್ಯೆ.

536 (13): ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?